ಬಾ... ' ಅನ್ನುತ್ತೀರಿ. ನಿಮ್ಮ ಪ್ರೀತಿ ಪಾತ್ರರಿಗೆ ಇಷ್ಟೆಲ್ಲಾ ಕಾಳಜಿ, ಪ್ರೀತಿ ವ್ಯಕ್ತಪಡಿಸುವಂತೆ ಮಾಡುವ ಕೆಮ್ಮು ನಿಜವಾಗಿಯೂ ಪ್ರೀತಿವರ್ಧಕ! ನಿಮ್ಮ ಸಂಬಂಧಗಳ ನಡುವೆ 'ಕೆಟಲಿಸ್ಟು'ಗಳಂತೆ ವರ್ತಿಸುವ ಕೆಮ್ಮನ್ನು ನೀವು ಅಷ್ಟು ಹಗುರಕ್ಕೆ ಪರಿಗಣಿಸಬೇಡಿ.

ಕೆಮ್ಮಿನ ಉಪಯೋಗ ಕಂಡುಕೊಂಡವರಲ್ಲಿ ನಮ್ಮ ಪಡ್ಡೆ ಹುಡುಗರಷ್ಟು 'ಶಾಣ್ಯಾ'ಗಳು ಯಾರೂ ಇಲ್ಲ. ಅವರಿಗೆ ಯಾವಾಗ ಹೇಗೆ ಕೆಮ್ಮಬೇಕು ಎಂಬುದು ಗೊತ್ತುಂಟು. ಮೆಲುವಾದ ಕೆಮ್ಮು, ಜೋರು ಕೆಮ್ಮು, ತೋರಿಕೆ ಕೆಮ್ಮು, ಕೋಪದಲ್ಲಿನ ಕೆಕ್ಕರಿಕೆ ಕೆಮ್ಮು... ಎಲ್ಲ ರೀತಿಯ ಕೆಮ್ಮುಗಳಲ್ಲಿ ಅವರು ಪಾರಂಗತರು. ಕ್ಲಾಸಿನಲ್ಲಿ ಕುಳಿತಿರುವಾಗಲೇ ಗಮನಿಸಿ, ಒಮ್ಮೆ ಮೆಲುವಾಗಿ ಕೆಮ್ಮಿದರೆ ಸಾಕು, ಆ ಸಂದೇಶ ಮುಟ್ಟುವವರಿಗೆ ಮುಟ್ಟುತ್ತದೆ. ಮುಂದಿನ ಸಾಲಿನಲ್ಲಿ ಕುಳಿತ ಆಕೆ ಹಿಂದಿರುಗಿ ಹುಸಿನಗುತ್ತಾಳೆ ಏನು? ಎಂಬಂತೆ ಕಣ್ಣಿನಲ್ಲೇ ಕೇಳುತ್ತಾಳೆ. ಉಳಿದ ವಿಷಯಗಳನ್ನು ಕಣ್ಣುಗಳೇ ಮಾತನಾಡಿಕೊಳ್ಳುತ್ತವೆ. ಎಲ್ಲಕ್ಕೂ ಪೀಠಿಕೆ ಹಾಕಿಕೊಡುವುದು ಮಾತ್ರ ಈ ಗುಮ್ಮನಗುಸಕ ಕೆಮ್ಮು! ಹೀಗೆ ಮಾತೇ ಇಲ್ಲದೆ ನಿಶ್ಯಬ್ದವಾಗಿ ಗೂಢಾರ್ಥವನ್ನು ದಾಟಿಸುವ ಶಕ್ತಿ ಇರುವುದು ಕೆಮ್ಮಿಗೆ ಮಾತ್ರವೇ.

ಕೆಮ್ಮು ಹಲವು ಕಾಯಿಲೆಗಳ ಲಕ್ಷಣ ಅಂತ ತೆಗಳುತ್ತಾರೆ. ಈ ವಾದವನ್ನು ನಾನು ಒಪ್ಪುವುದಿಲ್ಲ. ಆಕ್ಚ್ಯುವಲಿ.. 'ನಿನಗೆ ಯಾವುದೋ ಕಾಯಿಲೆ ತಗುಲಿಕೊಂಡಿದೆ, ಮೊದಲು ಹೋಗಿ ಡಾಕ್ಟರನ್ನು ಕಂಡು ಇಲಾಜು ಮಾಡಿಸಿಕೋ ಮಾರಾಯಾ...' ಅಂತ ಎಚ್ಚರಿಕೆ ಕೊಡುವುದೇ ಕೆಮ್ಮು. ಸಾವಿರಾರು ಬ್ಯಾಕ್ಟೀರಿಯಾಗಳು ಎಲ್ಲಿಂದಲೋ ವಲಸೆ ಬಂದು ನಿಮ್ಮ ದೇಹವನ್ನು ಸೇರಿ ಪರಿಸ್ಥಿತಿ ಹದಗೆಡಿಸುತ್ತಿದ್ದಂತೆ ಜಾಗೃತವಾದ ಕೆಮ್ಮು ನಿಮಗೆ ಸೂಚನೆ ಕೊಡಲಾರಂಭಿಸುತ್ತದೆ. ಇಂಥ ಪರೋಪಕಾರಿ ಕೆಮ್ಮನ್ನು ನೀವು ವೃಥಾ ಆರೋಪ ಮಾಡಿ ಕಳಂಕ ಹಚ್ಚಬೇಡಿ ಮಾರ್ರೇ..

ಕೆಮ್ಮಿಗೆ ಇನ್ನೂ ವಿವಿಧ ಅರ್ಥಗಳಿವೆ. ಮನೆಯ ಹಿರಿತಲೆಗಳಿಗೆ ಕೆಮ್ಮು ಒಂದು ಅಸ್ತ್ರ. ಎಲ್ಲರೂ ಅವರವರ ಕೆಲಸಗಳಲ್ಲಿದ್ದಾಗ ಮನೆಯಲ್ಲಿನ ವಯೋವೃದ್ಧ ಮಾವ ಒಮ್ಮೆ ಕೆಮ್ಮಿದರೆ ಅವರಿಗೇನೋ ಬೇಕಾಗಿದೆ ಎಂದು ಅರ್ಥ. ತಕ್ಷಣ ಸೊಸೆ ಅಲರ್ಟ್ ಆಗಿ ಓಡಿಬರುತ್ತಾಳೆ. 'ಏನಾದರೂ ಬೇಕಿತ್ತಾ ಮಾವ... ಔಷಧಿ ತೆಗೆದುಕೊಂಡಿರಾ... ಕಾಫಿ ಗೀಫಿ ಮಾಡಿ ಕೊಡಲೇ?' ಅಂತ ವಿಚಾರಿಸಿಕೊಳ್ಳುತ್ತಾಳೆ. ಹೀಗೆ ಕೆಮ್ಮನ್ನೇ 'ಕರೆಗಂಟೆ' ಮಾಡಿಕೊಂಡಿರುವ ಹಿರಿಯರ ಸಂಖ್ಯೆ ಬಹಳ ದೊಡ್ಡದಿದೆ.

ಗೆಳೆಯನೊಬ್ಬ 'ಎಂಥಾ ಕಾರ್ಯಕ್ರಮ ಮಾಡಿದ್ದೀಯಾ ಗುರೂ.., ಯಾವ್ ನನ್ಮಕ್ಕಳೂ 'ಕೆಮ್ಮಂಗಿಲ್ಲ' ನೋಡು, ಹಾಗಿದೆ...' ಅನ್ನುತ್ತಾನೆ. ಮದುವೆ ವಯಸ್ಸಿನ ಮಗಳನ್ನು ಎದುರಿಗೆ ಕೂಡಿಸಿ ಕೊಂಡ ಅಪ್ಪ 'ನಿನ್ನ ಮದುವೇನ ಹಂಗೆ ಧಾಂ.. ಧೂಂ.. ಅಂತ ಮಾಡ್ತೀನಿ ನೋಡ್ತಾ ಇರು ಮಗಳೇ.. ಯಾರೂ ಕೆಮ್ಮಬಾರದು ಹಂಗೆ ಮಾಡ್ತೀನಿ...' ಅನ್ನುತ್ತಾನೆ. ಅಂದರೆ ಯಾರೂ ಬೊಟ್ಟು ಮಾಡಿ ತೋರುವಂತಿಲ್ಲ. ಅಷ್ಟು ಅದ್ಭುತ, ವೈಭವವಾಗಿ ಮಾಡ್ತೀನಿ ಎಂದರ್ಥ.

ಯಾರಾದರೂ ಒಂದು ಗಂಭೀರ ವಿಚಾರ ಸರಣಿಯನ್ನು ಎಲ್ಲರೆದುರು ಮಂಡಿಸುವ ಮುನ್ನ ಎದ್ದು ನಿಂತು ಒಮ್ಮೆ ಕೆಮ್ಮಿ ಗಂಟಲು ಸರಿಪಡಿಸಿಕೊಳ್ಳುತ್ತಾರೆ. ನಾನು ಈಗ ಮಾತನಾಡಲಿರುವ ವಿಚಾರವು ಬಹಳ ಗಹನವಾದದ್ದು. ಎಲ್ಲರೂ ಇತ್ತ ಗಮನ ಕೊಡಿ ಎಂಬುದನ್ನು ಇದು ಸೂಚಿಸುತ್ತದೆ. ಅದು ಕೆಮ್ಮಿಗಿರುವ ಪ್ರಾಶಸ್ತ್ಯ. ಆರಂಭದಲ್ಲಿ ಹೀಗೊಂದು ಸಣ್ಣ ತಯಾರಿ ಮಾಡಿಕೊಂಡರೆ ಮುಂದೆ ಯಾವುದೇ ಅಡೆತಡೆಯಿಲ್ಲದೆ ನಿರರ್ಗಳವಾಗಿ ಮಾತನಾಡುತ್ತ ಹೋಗಬಹುದು ಎನ್ನುವುದು ನಂಬಿಕೆ. ಅದೇ ರೀತಿ ವಾದಸರಣಿಯ ಮಧ್ಯೆ ಕೇಳುತ್ತ ಕುಳಿತ ಕೇಳುಗನೊಬ್ಬ ಕೆಮ್ಮಿದನೆಂದರೆ ತಿರುಗಿ ಅದಕ್ಕೂ ಅರ್ಥವಿದೆ. ದಯವಿಟ್ಟು ನಿಮ್ಮ ಮಾತನ್ನು ತುಂಡರಿಸಿ ನನ್ನ ಮಾತನ್ನೂ ತುಸು ಕೇಳಿ ಎನ್ನುವ ವಿನಂತಿ ಅದು. ಹೀಗೆ ತಮ್ಮ ದಿನನಿತ್ಯದ ಆಗುಹೋಗುಗಳಲ್ಲಿ ಕೆಮ್ಮನ್ನು ತಮಗೆ ಹೇಗೋ ಬೇಕೋ ಹಾಗೆ ಬಳಸುವ, ಅರ್ಥೈಸಿಕೊಳ್ಳುವ ಪದ್ಧತಿ ಬಹಳ ಹಿಂದಿನಿದಲೂ ನಡೆದುಕೊಂಡು ಬಂದಿದೆ.



ಕೆಮ್ಮಿಗೆ ಇಷ್ಟೇ ವಯಸ್ಸೆಂಬುದಿಲ್ಲ. ಅದು ಕೇವಲ